# 'ಫೇಸ್‌ಬುಕ್-ಮುಸ್ಲಿಂ ವಿರೋಧಿ'

**ಕೈರೊ (ಪಿಟಿಐ):** 'ಫೇಸ್‌ಬುಕ್' ಸೇರಿದಂತೆ ಸಮಾಜ ಕಾರ್ಯ ಉದ್ದೇಶಿತ ವೆಬ್‌ಸೈಟ್ ಬಳಸುವುದು ಇಸ್ಲಾಂ ಧರ್ಮಕ್ಕೆ ವಿರೋಧವಾದದ್ದು ಎಂದು ಈಜಿಪ್ಟ್‌ನ ಮೌಲ್ವಿಯೊಬ್ಬರು ಪ್ರತಿಪಾದಿಸಿದ್ದು, ಇಂತಹ ವೆಬ್‌ಸೈಟ್ ಬಳಸುವವರ ವಿರುದ್ಧ ಶುಕ್ರವಾರ ಫತ್ವಾ ಹೊರಡಿಸಿದ್ದಾರೆ.

ಇಂತಹ ವೆಬ್‌ಸೈಟ್ ಬಳಸುವುದರಿಂದಾಗಿಯೇ ಮದುವೆಗಳು ಅಪಯಶಸ್ಸು ಕಾಣುತ್ತಿವೆ ಎಂದು ಸುನ್ನಿ ವಿಚಾರವಾದಿ ಹಾಗೂ ಈ ಹಿಂದೆ ಫತ್ವಾ ಸಮಿತಿ ಮುಖ್ಯಸ್ಥರಾಗಿದ್ದ ಶೇಖ್ ಅಬ್ದೆಲ್ ಹಮೀದ್ ಅಲ್-ಅತ್ರಾಸ್ ತಿಳಿಸಿದ್ದಾರೆ.